ಶೇ. 50 ರಷ್ಟು ಸಾರಜನಕವನ್ನು ಕೊಡಿ, ಕರಾವಳಿ ಪ್ರದೇಶದಲ್ಲಿ ಶೇ. 50 ರಷ್ಟು ಸಾರಜನಕ ಮತ್ತು ಪೊಟ್ಯಾಷ್ ಅನ್ನು ನಾಟಿ ಮಾಡಿದ 5–6 ವಾರಗಳಲ್ಲಿ ಕೊಡಿ. ಹವಾಗುಣಕ್ಕನುಸಾರವಾಗಿ 7 ರಿಂದ 8 ದಿನಕೊಮ್ಮೆ ನೀರು ಹಾಯಿಸಬೇಕು. ಕಳೆಗಳನ್ನು ಹತೋಟಿ ಮಾಡಬೇಕು.

**ಬೆಳೆ ಪರಿವರ್ತನೆ:** ಮಳೆಯಾಶ್ರಿತ ಬೆಳೆಯನ್ನು ಬೆಳೆಯುವಾಗ ಹಸಿರೆಲೆ ಗೊಬ್ಬರಗಳ ಬೆಳೆಗಳನ್ನು (ಸೆಣಬು, ಡಯೆಂಚಾ, ಅಲಸಂಧಿ, ಹುರುಳಿ ಇತ್ಯಾದಿ) ಬೆಳೆದು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ.

| ಕ್ರ. ಸಂ | ಕೀಟಗಳು | ಹಾನಿಯ ಲಕ್ಷಣಗಳು | ನಿರ್ವಹಣೆ ಕ್ರಮಗಳು |
|---|---|---|---|
| 1 | ಗೆಣಸಿನ ಮೂತಿ ಹುಳು | ಮೂತಿ ಹುಳುವಿನ ದುಂಬಿಗಳು ಬಳ್ಳಿಗಳನ್ನು ಮತ್ತು ಗಡ್ಡೆಗಳನ್ನು ತಿನ್ನುತ್ತವೆ. ಮರಿಹುಳುಗಳು ಗಡ್ಡೆಗಳೊಳಗೆ ಕೊರೆದು ತಿನ್ನುವದರಿಂದ ಕೊಳೆಯುತ್ತವೆ. | ಕೀಟ ಬಾಧೆ ಕಂಡೊಡನೆ 1 ಮಿ. ಲೀ. ಮಿಥೈಲ್ ಪೆರಾಥಿಯಾನ್ 50 ಇ.ಸಿ. ಅಥವಾ 1 ಮಿ. ಲೀ. ಆಕ್ಸಿಡೆಮೆಟಾನ್ ಮಿಥೈನ್ 25 ಇ.ಸಿ ಅಥವಾ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. 1 ಲೀಟರ ನೀರಿನಲ್ಲಿ ಕರಗಿಸಿ ಬೆಳೆಗೆ ಸಿಂಪಡಿಸಬೇಕು. |
| **ಕ್ರ. ಸಂ** | **ರೋಗಗಳು** | **ಲಕ್ಷಣಗಳು** | **ನಿರ್ವಹಣೆ ಕ್ರಮಗಳು** |
| 1 | ಎಲೆ ಚುಕ್ಕೆ ರೋಗ | ವಕ್ರಾಕಾರದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಆ ಮೇಲೆ ಒಂದಕ್ಕೊಂದು ಸೇರಿಕೊಂಡು ಎಲೆಗಳು ಒಣಗುತ್ತವೆ. | ಒಣಗಿ ಬಿದ್ದ ಎಲೆಗಳನ್ನು ನಾಶಪಡಿಸಬೇಕು. ರೋಗ ಹರಡುವಿಕೆ ತಡೆಯಲು ಶೇ. 0.2ರ ಮ್ಯಾಂಕೋಜೆಬ್ ದ್ರಾವಣದಿಂದ ಸಿಂಪರಣೆ ಮಾಡಬೇಕು. |

**ಕೊಯ್ಲು ಮತ್ತು ಇಳುವರಿ:**


ಇದು ತಳಿಗನುಸಾರವಾಗಿ ನಾಟಿ ಮಾಡಿದ 4 ರಿಂದ 5 ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಅಗೆಯುವುದಕ್ಕೆ ಮುನ್ನ ಬಳ್ಳಿಯನ್ನು ಕತ್ತರಿಸಿ ತೆಗೆಯಬೇಕು ಪ್ರತಿ ಹೆಕ್ಟೇರಿಗೆ 12 ರಿಂದ 15 ಟನ್ ಗಡ್ಡೆಗಳನ್ನು ಪಡೆಯಬಹುದು.



ಗೆಣಸಿನ ಮೂತಿ ಹುಳುವಿನ ಬಾಧೆಗೊಳಗಾದ ಗಡ್ಡೆಗಳು








**ಲೇಖಕರು**

ಡಾ. ಕೆ. ರಾಮಚಂದ್ರ ನಾಯ್ಕ

ಶ್ರೀಧರ ಡಿ.



**ಪ್ರಕಾಶಕರು**

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೊಟ, ಕರ್ನಾಟಕ
ಅಖಿಲ ಭಾರತ ಗಡ್ಡೆ ಗೆಣಸು ಸಂಶೋಧನಾ ಸಮನ್ವಯ ಯೋಜನೆ,
ಸಿಟಿಸಿಆರ್‌ಐ, ಶ್ರೀಕರಿಯಂ, ತಿರುವನಂತಪುರಂ, ಕೇರಳ



**ಹೆಚ್ಚಿನ ಮಾಹಿತಿಗಾಗಿ**

ಡಾ. ಕೆ. ರಾಮಚಂದ್ರ ನಾಯ್ಕ
ಮುಖ್ಯಸ್ಥರು, ಅಖಿಲ ಭಾರತ ಗಡ್ಡೆ ಗೆಣಸು
ಸಂಶೋಧನಾ ಸಮನ್ವಯ ಯೋಜನೆ,
ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,
ಕುಂಬಾಪುರ, ಎನ್.ಹೆಚ್ 4, ಬೈಪಾಸ್, ಬೆಳಗಾವಿ ರಸ್ತೆ,
ಧಾರವಾಡ–580 005, ಕರ್ನಾಟಕ



ಪ್ರತಿಗಳು : 1000



ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಬಾಗಲಕೋಟ, ಕರ್ನಾಟಕ

UNIVERSITY OF HORTICULTURAL SCIENCES,
BAGALKOT, KARNATAKA


# ಸಿಹಿ ಗೆಣಸಿನ ಸುಧಾರಿತ ಬೇಸಾಯ ಕ್ರಮಗಳು




ಹಸ್ತ ಪತ್ರಿಕೆ

ಮೇ, 2015

All India Coordinated Research Project on Tuber Crops,
CTCRI,Sreekariyam, Tiruvanathapuram, Kerala.

ಅಖಿಲ ಭಾರತ ಗಡ್ಡೆ ಗೆಣಸು ಸಂಶೋಧನಾ ಸಮನ್ವಯ ಯೋಜನೆ,
ಸಿಟಿಸಿಆರ್‌ಐ, ಶ್ರೀಕರಿಯಂ, ತಿರುವನಂತಪುರಂ, ಕೇರಳ

## ಸಿಹಿ ಗೆಣಸು (*Ipomoea batatas* (L) Poir. )

ಸಿಹಿಗೆಣಸಿನ ತವರು ದಕ್ಷಿಣ ಅಮೇರಿಕಾ ಎಂಬುದು ಬಹುಕಾಲದಿಂದ ಅಂಗೀಕೃತವಾದ ಅಭಿಪ್ರಾಯ, ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಇದರ ತವರು ಆಫ್ರಿಕಾಖಂಡ ಎಂದು ಧೃಡಪಟ್ಟಿದೆ. ಕೊಲಂಬಸ್ ಅಮೇರಿಕಾವನ್ನು ಅನ್ವೇಷಿಸುವುದಕ್ಕೂ ಮುಂಚೆ ಸಿಹಿ ಗೆಣಸು ಆಫ್ರಿಕಾದಿಂದ ದಕ್ಷಿಣ ಅಮೇರಿಕಾ ಸೇರಿ ಅಲ್ಲಿ ಬೇರು ಬಿಟ್ಟಿತ್ತು ಮತ್ತು ಅಲ್ಲಿಯ ಜನಾಂಗಗಳ ಮುಖ್ಯ ಆಹಾರ ವಸ್ತುಗಳಲ್ಲೊಂದಾಗಿತ್ತು. ನಂತರ ಕೊಲಂಬಸ್‌ನೊಂದಿಗೆ ಯುರೋಪನ್ನು ಪ್ರವೇಶಿಸಿತು. ಪೋರ್ಚುಗೀಸರು 18ನೇ ಶತಮಾನದಲ್ಲಿ ಇದನ್ನು ಭಾರತಕ್ಕೆ ತಂದರೆಂದು ಹೇಳಲಾಗಿದೆ.

ಇದೊಂದು ಪ್ರಮುಖವಾದ ಗಡ್ಡೆ ತರಕಾರಿ ಬೆಳೆಯಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಶರ್ಕರ ಪಿಷ್ಟವನ್ನು ಹೊಂದಿರುತ್ತದೆ. ವಿದೇಶಿ ತಳಿಗಳು ಹೆಚ್ಚಾಗಿ ಕ್ಯಾರೋಟಿನ್ ಹೊಂದಿರುತ್ತವೆ. ಈ ಬೆಳೆಯನ್ನು ಮಳೆಯಾಶ್ರಿತ ಹಾಗೂ ನೀರಾವರಿಯಲ್ಲಿ ಬೆಳೆಯಬಹುದಾಗಿದ್ದು, ಸ್ವಲ್ಪಮಟ್ಟಿಗೆ ಒಣ ಹವೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.

**100 ಗ್ರಾಂ. ತಿನ್ನಲು ಯೋಗ್ಯವಿರುವ ಗೆಣಸಿನಲ್ಲಿ ಲಭ್ಯವಿರುವ ಪೋಷಕಾಂಶಗಳು**

| | | | | | |
|---|---|---|---|---|---|
| 1 | ಪಿಷ್ಠ | 27 ಗ್ರಾಂ. | 7 | 'ಎ' ಜೀವಸತ್ವ | 10 ಐ.ಯು |
| 2 | ಸಸಾರಜನಕ | 1.2 ಗ್ರಾಂ. | 8 | 'ಬಿ' ಜೀವಸತ್ವ | 81 ಎಂ.ಸಿಜಿ |
| 3 | ಕೊಬ್ಬು | 0.4 ಗ್ರಾಂ. | 9 | ನಯಾಸಿನ್ | 0.7 ಮಿ.ಗ್ರಾಂ. |
| 4 | ಸುಣ್ಣ | 20.0 ಮಿ.ಗ್ರಾಂ. | 10 | 'ಸಿ' ಜೀವಸತ್ವ | 30.0 ಮಿ.ಗ್ರಾಂ. |
| 5 | ರಂಜಕ | 4.5 ಮಿ. ಗ್ರಾಂ. | 11 | ಸೋಡಿಯಂ | 10.0 ಮಿ.ಗ್ರಾಂ. |
| 6 | ಕಬ್ಬಿಣ | 0.7 ಮಿ. ಗ್ರಾಂ. | 12 | ಪೊಟ್ಯಾಷಿಯಂ | 373.0 ಮಿ.ಗ್ರಾಂ. |

### ಗೆಣಸಿನಿಂದ ತಯಾರಿಸ ಬಹುದಾದ ತಿಂಡಿತಿನಿಸುಗಳು:

ಸಿಹಿಗೆಣಸನ್ನು ಅನ್ನದ ಬದಲು ಉಪಯೋಗಿಸಬಹುದು. ಇದು ಬಡವರಿಗೆ ವರದಾನ ಎನ್ನಿಸಿದೆ. ಹೆಚ್ಚಿನ ಪಿಷ್ಠ ಇರುವುದರಿಂದ ಮಧುಮೇಹಿ ರೋಗಿಗಳು ವಾತರೋಗಿಗಳು ಮತ್ತು ಸ್ಥೂಲಕಾಯರಿಗೆ ಹಿತಕರವಲ್ಲ. ಇದರಿಂದ ಅನೇಕ ಖಾದ್ಯ ಪದಾರ್ಥಗಳನ್ನು ತಯಾರು ಮಾಡಬಹುದು.

1) **ಗೆಣಸಿನ ಹಲ್ವ:** ಆಲೂಗಡ್ಡೆಯ ಹಲ್ವದಂತೆ ತಯಾರಿಸಬಹುದು.

2) **ಗೆಣಸಿನ ಒಬ್ಬಟ್ಟು:** ಎಲ್ಲಾ ಹೋಳಿಗೆಗಳನ್ನು ತಯಾರಿಸಿದಂತೆಯೇ, ಸಿಹಿಗೆಣಸಿನ ಒಬ್ಬಟ್ಟು ತಯಾರಿಸಲು ಇದರ ಹೂರಣಕ್ಕೆ ಬೇಯಿಸಿದ ಗೆಣಸು, ಏಲಕ್ಕಿ ಶುಂಠಿ ಪುಡಿ, ತೆಂಗಿನತುರಿ ರುಬ್ಬಿ ಉಪಯೋಗಿಸಬಹುದು.

3) ಸಿಹಿಗೆಣಸನ್ನು ಸುಟ್ಟು ಮತ್ತು ಬೇಯಿಸಿ ಉಪಯೋಗಿಸುವುದು.

4) ಆಲೂಗಡ್ಡೆಯ ಪಲ್ಯದಂತೆ ಇದರ ಪಲ್ಯ ತಯಾರಿಸಬಹುದು.

5) ಸಿಹಿಗೆಣಸನ್ನು ಚೆನ್ನಾಗಿ ತೊಳೆದು ದಪ್ಪದಪ್ಪ ಹೋಳುಗಳಾಗಿ ಕತ್ತರಿಸಿ ಅವಶ್ಯವಿದ್ದಷ್ಟು ನೀರು ಹಾಕಿ ಬೇಯಿಸಬೇಕು. ಬೆಂದ ಗೆಣಸಿಗೆ ಬೆಲ್ಲ ಸೇರಿಸಿ ತಿನ್ನಲು ಉಪಯೋಗಿಸಬಹುದು.

**ಮಣ್ಣು :** ಹಗುರವಾದ ಹಾಗೂ ಫಲವತ್ತಾದ ಮರಳು ಮಿಶ್ರಿತ ಗೋಡು ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯಬಹುದು. ಸವಳು ಮಣ್ಣಿನ ವಿದ್ಯುದ್ವನತೆ 4 ರಿಂದ 6 ಡೆ.ಸೈ/ಮಿ. ಇರುವಲ್ಲಿ ಬೆಳೆಯಬಹುದು.

**ನಾಟಿ ಕಾಲ:** ಸಾಮಾನ್ಯವಾಗಿ ಒಣಪ್ರದೇಶಗಳಲ್ಲಿ ಮಳೆ ಆಶ್ರೀತ ಬೆಳೆಯನ್ನು ಜೂನ್–ಜುಲೈ ತಿಂಗಳುಗಳಲ್ಲಿ, ಕರಾವಳಿ ಪ್ರದೇಶದಲ್ಲಿ ಮೇ ಜೂನ್ ತಿಂಗಳಲ್ಲಿ ಪ್ರಾರಂಭಿಸಬಹುದು. ಎರಡನೆ ಬೆಳೆಯನ್ನು ಸೆಪ್ಟೆಂಬರ – ಅಕ್ಟೋಬರ್ ತಿಂಗಳಲ್ಲಿ ಬೆಳೆಯಬಹುದಾಗಿದ್ದು, ಇದರಿಂದ ಆಗ್ನೇಯ ಮಳೆಗಳ ಉಪಯೋಗವನ್ನು ಪಡೆಯಬಹುದಾಗಿದೆ. ನೀರಾವರಿ ಬೆಳೆಯನ್ನು ದಕ್ಷಿಣ ಒಣ ಪ್ರದೇಶದಲ್ಲಿ ಅಕ್ಟೋಬರ–ಡಿಸೆಂಬರ ಮತ್ತು ಕರಾವಳಿ ಪ್ರದೇಶದಲ್ಲಿ ಸೆಪ್ಟೆಂಬರ ತಿಂಗಳುಗಳಲ್ಲಿ ಪ್ರಾರಂಭಿಸಬಹುದು.

### ತಳಿಗಳು

#### ಅ) ಒಣ ಪ್ರದೇಶಕ್ಕೆ

1. **ಹೊಸೂರು ರೆಡ ಮತ್ತು ಹೊಸುರು ಗ್ರೀನ್:** ಇವು ಪ್ರಾದೇಶಿಕ ತಳಿಗಳು.
2. **ವಿ.6:** ಇದು ಇತ್ತೀಚೆಗೆ ಕರ್ನಾಟಕವನ್ನು ಪ್ರವೇಶಿಸಿದೆ. ಈ ತಳಿಯನ್ನು ಪಂಜಾಬ್ ರಾಜ್ಯದಿಂದ ಪರಿಚಯಿಸಲಾಗಿದೆ. ಈ ತಳಿಯ ಗಡ್ಡೆಗಳ ಬಣ್ಣ ಕೆಂಪಾಗಿದ್ದು, ಒಳ್ಳೆಯ ಗುಣಮಟ್ಟವನ್ನು ಹೊಂದಿರುತ್ತವೆ. ಇದು ನಾಟಿ ಮಾಡಿದ 5 ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ.
3. **ವಿ.12:** ಕೊಯಮತ್ತೂರಿನಿಂದ ಈ ಪ್ರದೇಶಕ್ಕೆ ತಂದ ತಳಿಯಾಗಿದ್ದು ಇದರ ಗಡ್ಡೆಗಳು ಕಂದು ಬಣ್ಣ ಹೊಂದಿವೆ. ಇದೂ ಕೂಡ ಇತ್ತೀಚೆಗೆ ಕರ್ನಾಟಕವನ್ನು ಪ್ರವೇಶಿಸಿದೆ. ಕಂದು ಬಣ್ಣದ ಗಡ್ಡೆ ಹೊಂದಿರುವ ಈ ತಳಿ 4 ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ.
4. **ಹೆಚ್.41 ಮತ್ತು ಹೆಚ್.42:** ತಿರುವನಂತಪುರದ ಸೆಂಟ್ರಲ್ ಟ್ಯೂಬರ್ ಕ್ರಾಫ ರಿಸರ್ಚ ಇನಸ್ಟಿಟ್ಯೂಟ್ (CTCRI) ಬಿಡುಗಡೆ ಮಾಡಿರುವ ಈ ಹೈಬ್ರಿಡ್ ತಳಿಗಳು ಹೆಚ್ಚು ಇಳುವರಿ ನೀಡುತ್ತವೆ.
5. **ವಿಕ್ರಮ್ (ಸಿ.ಆಯ್ 853–4):** ಈ ತಳಿಯ ಗಡ್ಡೆಯ ಸಿಪ್ಪೆಯು ಕೆಂಪಾಗಿದ್ದು, ತಿರುಳು ತೆಳು ಹಳದಿ ಬಣ್ಣ ಹೊಂದಿದೆ. ನಾಟಿ ಮಾಡಿದ 85–90 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಇದು ಅಧಿಕ ಇಳುವರಿ ಕೊಡುವ ತಳಿಯಾಗಿದೆ.

#### ಬ) ಕರಾವಳಿ ಪ್ರದೇಶಕ್ಕೆ

1. **ಸಿ–43:** ಮಧ್ಯಮವಾಗಿ ಹರಡುವ ತಳಿಯಾಗಿದ್ದು ಬಿಳಿ ಗಡ್ಡೆಗಳನ್ನು ಹೊಂದಿರುತ್ತದೆ. ಶೀಘ್ರವಾಗಿ ಅಧಿಕ ಇಳುವರಿ ಕೊಡುವ ತಳಿ. 100 ರಿಂದ 110 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ.
2. **ವಿ–35:** ಅತಿಯಾಗಿ ಹರಡುವ ತಳಿಯಾಗಿದ್ದು, 120 ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಗಡ್ಡೆಗಳು ಮಧ್ಯಮ ಗಾತ್ರದವಾಗಿದ್ದು ಬಿಳಿ ಬಣ್ಣ ಹೊಂದಿರುತ್ತವೆ.
3. **ವಿ–30 :** ಗಡ್ಡೆಗಳು ಮಧ್ಯಮ ಗಾತ್ರವಾಗಿದ್ದು ಹಳದಿ ಬಣ್ಣ ಹೊಂದಿರುತ್ತವೆ.
4. ಹೊಸೂರ್ ರೆಡ್
5. ಹೆಚ್.41 ಮತ್ತು ಹೆಚ್.42:

### ಬೇಸಾಯ ಸಾಮಗ್ರಿಗಳು

| ಕ್ರ. ಸಂ | ವಿವರಗಳು | ಪ್ರತಿ ಹೆಕ್ಟೇರಿಗೆ | |
|---|---|---|---|
| | | ಒಣ ಪ್ರದೇಶ | ಕರಾವಳಿ ಪ್ರದೇಶ |
| 1 | ಬಿತ್ತನೆ ತುಂಡುಗಳು (3 ರಿಂದ 4 ಕಣ್ಣುಗಳಿರುವ ತುಂಡುಗಳು) | 55,500 | 50,000 |
| 2 | ಕೊಟ್ಟಿಗೆ ಗೊಬ್ಬರ | 10 ಟನ್ | 20 ಟನ್ |
| 3 | ರಸಾಯನಿಕ ಗೊಬ್ಬರಗಳು | | |
| | ಸಾರಜನಕ | 75 ಕಿ. ಗ್ರಾಂ. | 75 ಕಿ. ಗ್ರಾಂ. |
| | ರಂಜಕ | 50 ಕಿ. ಗ್ರಾಂ. | 50 ಕಿ. ಗ್ರಾಂ. |
| | ಪೊಟ್ಯಾಷ್ | 75 ಕಿ. ಗ್ರಾಂ. | 75 ಕಿ. ಗ್ರಾಂ. |

### ಬೇಸಾಯ ಕ್ರಮಗಳು:

#### ಬಿತ್ತನೆ:

ಭೂಮಿಯನ್ನು ಹದ ಮಾಡಿ ನಂತರ 60 ಸೆಂ. ಮೀ. ಅಂತರದಲ್ಲಿ ಸಾಲುಗಳನ್ನು ತಯಾರಿಸಿ. ನಂತರ ಪೂರ್ತಿ ಪ್ರಮಾಣದ ಕೊಟ್ಟಿಗೆ ಗೊಬ್ಬರ, ರಂಜಕ ಮತ್ತು ಪೊಟ್ಯಾಷ್ ಹಾಗೂ ಶೇ. 50 ರಷ್ಟು ಸಾರಜನಕವನ್ನು ಸಾಲುಗಳಲ್ಲಿ ಹಾಕಿ ಮಣ್ಣಿಗೆ ಸೇರಿಸಿ, ಕರಾವಳಿ ಪ್ರದೇಶದಲ್ಲಿ ಶೇ. 50 ರಷ್ಟು ಸಾರಜನಕ ಮತ್ತು ಪೊಟ್ಯಾಷ ಹಾಗೂ ಪೂರ್ಣ ಪ್ರಮಾಣದ ರಂಜಕವನ್ನು ಮಣ್ಣಿಗೆ ಸೇರಿಸಿ, 30 ಸೇಂ. ಮೀ. ಅಂತರದಲ್ಲಿ ತುಂಡುಗಳನ್ನು ನೆಡಬೇಕು. ನಂತರ ಭೂಮಿಗೆ ತೆಳುವಾಗಿ ನೀರನ್ನು ಹಾಯಿಸಿ. ನಾಟಿ ಮಾಡಿದ 5–6 ವಾರಗಳ ನಂತರ ಉಳಿದ